# ಪ್ರಾರ್ಥನೆ

## ದುರ್ಗಾಸ್ತುತಿಃ - ೨



**ಸ್ತ್ರೀಪುಂಸ್ತ್ವಪ್ರಮುಖೈರುಪಾಧಿನಿಚಯೈರ್ಹೀನಂ ಪರಂ ಬ್ರಹ್ಮ ಯತ್**
**ತ್ವತ್ತೋ ಯಾ ಪ್ರಥಮಂ ಬಭೂವ ಜಗತಾಂ ಸೃಷ್ಟೌ ಸಿಸೃಕ್ಷಾ ಸ್ವಯಮ್ ।**
**ಸಾ ಶಕ್ತಿಃ ಪರಮಾಽಪಿ ಯಚ್ಚ ಸಮಭೂನ್ಮೂರ್ತಿದ್ವಯಂ ಶಕ್ತಿತ-**
**ಸ್ತ್ವನ್ಮಾಯಾಮಯಮೇವ ತೇನ ಹಿ ಪರಂ ಬ್ರಹ್ಮಾಪಿ ಶಕ್ತ್ಯಾತ್ಮಕಮ್ ॥ ೪ ॥**

ಸ್ತ್ರೀ, ಪುರುಷ ಮೊದಲಾದ ಉಪಾಧಿಗಳ ಸಮೂಹ ಇಲ್ಲದ 'ಪರಬ್ರಹ್ಮ' ಎಂಬುದೇನಿದೆಯೋ, ಮತ್ತು ಅದರಲ್ಲಿ ಜಗತ್ತನ್ನು ಸೃಷ್ಟಿಸಬೇಕೆಂಬ ಯಾವ ಬಯಕೆ ಮೊಟ್ಟಮೊದಲಿಗೆ ಉಂಟಾಯಿತೋ, ಅದು ನಿನ್ನ ಪರಮಶಕ್ತಿಯ ಪ್ರಭಾವವೇ ಆಗಿದೆ. ಆ 'ಶಕ್ತಿ'ಯು ಸ್ತ್ರೀ-ಪುರುಷ ಎಂದು ಎರಡು ರೂಪಗಳಾಗಿ ವಿಭಜಿತವಾದುದೂ ನಿನ್ನಿಂದಲೇ. ಈ ಕಾರಣದಿಂದ ಆ 'ಪರಬ್ರಹ್ಮ'ವೂ ನಿನ್ನ ಮಾಯಾಮಯ ಶಕ್ತಿಸ್ವರೂಪವೇ ಆಗಿದೆ.

**ತೋಯೋತ್ಥಂ ಕರಕಾದಿಕಂ ಜಲಮಯಂ ದೃಷ್ಟ್ವಾ ಯಥಾ ನಿಶ್ಚಯ-**
**ಸ್ತೋಯತ್ವೇನ ಭವೇದ್ಗ್ರಹೋಽಪ್ಯಭಿಮತಾಂ ತಥ್ಯಂ ತಥೈವ ಧ್ರುವಮ್ ।**
**ಬ್ರಹ್ಮೋತ್ಥಂ ಸಕಲಂ ವಿಲೋಕ್ಯ ಮನಸಾ ಶಕ್ತ್ಯಾತ್ಮಕಂ ಬ್ರಹ್ಮ ತ-**
**ಚ್ಛಕ್ತಿತ್ವೇನ ವಿನಿಶ್ಚಿತಃ ಪುರುಷಧೀಃ ಪಾರಂ ಪರಾ ಬ್ರಹ್ಮಣಿ ॥ ೫ ॥**

ಹೇಗೆ ನೀರಿನಲ್ಲಿ ಹುಟ್ಟಿದ ಅಲೆಗಳನ್ನು ನೋಡಿ ಜನರು ಇದು ನೀರೇ ಎಂದು ನಿಶ್ಚಯಜ್ಞಾನ ಹೊಂದುವರೋ, ಅದೇ ರೀತಿ ಬ್ರಹ್ಮನಿಂದ ಹುಟ್ಟಿದ ಈ ಸಂಪೂರ್ಣ ಜಗತ್ತನ್ನು ನೋಡಿ, ಈ 'ಶಕ್ತಿಸ್ವರೂಪ'ವು ಬ್ರಹ್ಮನೇ ಎಂದು ಮನಸ್ಸಿನಲ್ಲಿ ನಿಶ್ಚಯಿಸಿಕೊಳ್ಳುವರು. ಅಂತೆಯೇ ಪರಾತ್ಪರ ಪರಬ್ರಹ್ಮದಲ್ಲಿ ಪುರುಷಬುದ್ಧಿ ಉಂಟಾಗುವುದೂ ಆ ಶಕ್ತಿಯ ಸ್ವರೂಪವೇ ಎಂದು ಸುನಿಶ್ಚಿತವಾಗುತ್ತದೆ.

**ಷಟ್‌ಚಕ್ರೇಷು ಲಸಂತಿ ಯೇ ತನುಮತಾಂ ಬ್ರಹ್ಮಾದಯಃ ಷಟ್‌ಶಿವಾ-**
**ಸ್ತೇ ಪ್ರೇತಾ ಭವದಾಶ್ರಯಾಚ್ಚ ಪರಮೇಶತ್ವಂ ಸಮಾಯಾಂತಿ ಹಿ ।**
**ತಸ್ಮಾದೀಶ್ವರತಾ ಶಿವೇ ನಹಿ ಶಿವೇ ತ್ವಯ್ಯೇವ ವಿಶ್ವಾಂಬಿಕೇ**
**ತ್ವಂ ದೇವಿ ತ್ರಿದಶೈಕವಂದಿತಪದೇ ದುರ್ಗೇ ಪ್ರಸೀದಸ್ವ ನಃ ॥ ೬ ॥**

ಜಗದಂಬಿಕೆ, ದೇಹಧಾರಿಗಳ ಶರೀರದಲ್ಲಿರುವ ಆರು ಚಕ್ರಗಳಲ್ಲಿ ಬ್ರಹ್ಮ ಮೊದಲಾದ ಆರು ವಿಭೂತಿಗಳು ಪ್ರಕಟಣೆಗೊಳ್ಳುತ್ತವೆ. ಅವು ಪ್ರಳಯವಾದ ನಂತರ ನಿನ್ನನ್ನಾಶ್ರಯಿಸಿ ಪರಮೇಶನ ಸ್ಥಾನವನ್ನು ಪಡೆಯುತ್ತವೆ. ಆದುದರಿಂದ ಶಿವೆ! ಶಿವನೇ ಮೊದಲಾದ ದೇವತೆಗಳಲ್ಲಿ ಸ್ವತಃ ಈಶ್ವರತ್ವವಿಲ್ಲ; ಅದು ನಿನ್ನಲ್ಲಿ ಮಾತ್ರವೇ ಇದೆ. ಸಕಲ ದೇವತೆಗಳೂ ನಿನ್ನ ಪಾದಕಮಲಗಳನ್ನು ಅರ್ಚಿಸುವರು. ಅಮ್ಮಾ ದುರ್ಗೇ, ನೀನು ನಮ್ಮ ಮೇಲೆ ಕೃಪೆ ತೋರು.

— ಭಾಗವತ

## ಸೂಕ್ತಿಪ್ರಭ

**ತ**ತ್ತ್ವವಿಲ್ಲದೆ ಅನುಭವ ಮಾತ್ರವಿದ್ದರೆ ಅದು ಕುರುಡಾಗಿರುತ್ತದೆ; ಅನುಭವವಿಲ್ಲದೆ ತತ್ತ್ವ ಮಾತ್ರವಾಗಿದ್ದರೆ ಅದು ಬರೀ ಬೌದ್ಧಿಕ ಆಟವಾಗಿರುತ್ತದೆ.

— ಇಮ್ಯಾನ್ಯುಅಲ್ ಕ್ಯಾಂಟ್

**ಕ್ರೋ**ಧವನ್ನು ಅಕ್ರೋಧದಿಂದ, ಅಸಾಧುವಾದುದನ್ನು ಸಾಧುತ್ವದಿಂದ, ಜಿಪುಣನನ್ನು ದಾನದಿಂದ, ಸುಳ್ಳುಗಾರನನ್ನು ಸತ್ಯದಿಂದ ಗೆಲ್ಲಬೇಕು. — ಬುದ್ಧ

**ಬ**ಲ್ಲೆನೆಂಬಾ ಮಾತು ಎಲ್ಲವೂ ಹುಸಿ ನೋಡ
ಬಲ್ಲರೆ ಬಲ್ಲೆನೆನಬೇಡ । ಸುಮ್ಮನಿರ
ಬಲ್ಲರೆ ಬಲ್ಲ ಸರ್ವಜ್ಞ — ಸರ್ವಜ್ಞ

**ನಿ**ನ್ನಲ್ಲಿರುವ ವಸ್ತುವನ್ನು ದಾನ ಮಾಡುವಾಗ ನೀನು ಬಹಳ ಕಡಿಮೆ ಕೊಡುತ್ತೀಯೆ. ಆದರೆ, ನಿನ್ನನ್ನೇ ನೀನು ಕೊಡುವಾಗ ನಿಜವಾಗಿಯೂ ಕೊಟ್ಟಂತೆ. — ಖಲೀಲ್ ಗಿಬ್ರಾನ್